ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 86-92
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸುಡುಗಾಡು ಸಿದ್ಧರ ಜೋಳಿಗೆಯ ಮಹತ್ವ

**ಡಾ. ಪ್ರವೀಣ ಕುಮಾರ ಬಿ.**
ಸಂಶೋಧಕರು, ಹಗರಿಬೊಮ್ಮನಹಳ್ಳಿ.

***Abstract:***
*ಅಲೆಮಾರಿ ಜೀವನದಿಂದ ಆರಂಭಿಸಿದ ಮಾನವನ ಜೀವನ ವಿಧಾನ ಕ್ರಮೇಣ ಕಾಲಾಂತರದಲ್ಲಿ ಗುಂಪಾಗಿ ವಾಸಿಸುವ ನಾಗರಿಕ ಹಂತವನ್ನು ತಲುಪಿತು. ಈ ಹಂತದಲ್ಲಿ ಜಗತ್ತಿನ ಅನೇಕ ನಾಗರಿಕತೆಗಳು ಬೆಳೆದು ಬಂದವು. ವ್ಯವಸ್ಥಿತವಾದಂತಹ ಜೀವನ ಆರಂಭವಾಗಿದ್ದು, ಮುಂದಿನ ಹಂತದಲ್ಲಿ ತಮ್ಮ ತಮ್ಮ ಗುಂಪುಗಳನ್ನು ಒಂದೆಡೆ ಸೇರಿಸಿ ಅನೇಕ ಸಮುದಾಯಗಳು ನೆಲೆನಿಂತವು. ಆ ನೆಲೆಗೆ ಒಂದು ಗುರುತಿಸಬಹುದಾದಂತಹ ಹೆಸರನ್ನು ಇಡಲಾಗಿತ್ತು. ಅದೇ ಮುಂದೆ ಅವರ ವೃತ್ತಿಯ ಅನುಸಾರವಾಗಿ ಸಮುದಾಯಗಳ ಹೆಸರಾಗಿ ತಮ್ಮದೇ ಆದಂತಹ ಮನೆ, ಗುಡಿಸಲುಗಳ ರಚನೆಯಾಗಿ ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಸಮುದಾಯ ಎಂಬ ಪರಿಕಲ್ಪನೆಯು ಮೂಡತೊಡಗಿತು. ಪ್ರಸ್ತುತ ಲೇಖನದಲ್ಲಿ ಸುಡುಗಾಡು ಸಿದ್ಧರ ಜೋಳಿಗೆಯ ಮಹತ್ವವನ್ನು ಕುರಿತು ಚರ್ಚಿಸಲಾಗಿದೆ.*

***Keywords:*** *ಅಲೆಮಾರಿ ಜೀವನ, ವಲಸೆ, ಸುಡುಗಾಡು ಸಿದ್ಧರು, ಜೋಳಿಗೆ*

**ಪೀಠಿಕೆ**

ಅಲೆಮಾರಿ ಜೀವನ ಸಂಸ್ಕೃತಿಯಿಂದ ಪಲ್ಲಟಗೊಂಡ ಮಾನವನ ಸಮುದಾಯವು ಈ ಬಗೆಯ ಸಮುದಾಯದಲ್ಲಿ ಬದುಕಿ ಜಗತ್ತಿನ ವಿಕಾಸಕ್ಕೆ ಕಾರಣವಾಗಿತ್ತು ಎಂಬುದು ಗಮನಿಸಬಹುದು. ಈ ಮೂಲಕ ಆಯಾ ಜನಾಂಗ ಸಂಸ್ಕೃತಿ ಮತ್ತು ವ್ಯವಸ್ಥೆಯ ಭದ್ರತೆ ಒಂದೊಂದು ಆಧುನೀಕೋತ್ತರ ಜೀವನಕ್ಕೆ ಭದ್ರ ತಳಹದಿ ಆಗಿರಬಹುದೆಂದು ಹೇಳಬಹುದು. ಆಚಾರ ವಿಚಾರಗಳು ಮತ್ತು ಬದುಕಿನ ವ್ಯವಸ್ಥೆ ಮಾರ್ಗಗಳು ಬಹು ಮುಖ್ಯವಾಗಿ ಬೆಳೆದುಬಂದು ಮೌಖಿಕ ಪರಂಪರೆಯಲ್ಲಿ ಅಡಗಿದ ಅಕ್ಷರವಲ್ಲದ ಅಲೆಮಾರಿ ಸಮುದಾಯ ಮಾನವನ ಬದುಕಿಗೆ ಮೌಖಿಕ ಸಂಪತ್ತನ್ನು ತನ್ನ ವಿಚಾರ, ಬುದ್ಧಿವಂತಿಕೆ ವಿಕಾಸವಾದಂತೆ ಒಂದು ಕಡೆ ನಿಂತು ಜೀವಿಸುವ ಪ್ರಯತ್ನ ಮಾಡಿದ್ದಾನೆ. ನಂತರ ಅವನಿಗೆ ಬೇಕಾದ ವ್ಯವಸ್ಥೆಯ ಜೀವನಕ್ಕೆ ದಿನನಿತ್ಯದ ಆಧಾರಗಳನ್ನು ಒಂದೆಡೆ ರೂಪಿಸಿಕೊಂಡು ಒಟ್ಟು ಜಗತ್ತಿನ ಪ್ರಾದೇಶಿಕವಾಗಿ ಎಲ್ಲವನ್ನು ಗುರುತಿಸಿಕೊಂಡು ಒಂದೊಂದು ಸಂಸ್ಕೃತಿ ಬೇರುಗಳು ಅನಾವರಣಗೊಳ್ಳುವುದು ಸರ್ವಕಾಲಿಕ ಸತ್ಯವಾಗಿದೆ. ನಗರ ಸಂಸ್ಕೃತಿಯಿಂದ ಪರಿಕಲ್ಪನೆ ಅಗಾಧವಾದಾಗ ನೆಲೆಗಳಿಂದ ಗ್ರಾಮ ಸಮುದಾಯ ಜೀವನ ಮುಂದುವರೆದು ಜೀವನ ಸಂಸ್ಕೃತಿ ಕಾಲಾಂತರದಲ್ಲಿ ಅನೇಕ ಕಾಲಘಟ್ಟಗಳಲ್ಲಿ ಉಂಟಾದ ಮಾನವನ ಬದುಕಿನ ಸ್ಥಿತ್ಯಂತರಗಳು ಉಂಟಾದ ಪರಿಣಾಮಗಳನ್ನು ಕುತೂಹಲದಿಂದ ಈ ಅಧ್ಯಯನ ಮಾಡುವುದಕ್ಕೆ ಪ್ರೇರೇಪಿಸುತ್ತದೆ.

***Please cite this article as:*** ಪ್ರವೀಣ ಕುಮಾರ ಬಿ. (2025). ಸುಡುಗಾಡು ಸಿದ್ಧರ ಜೋಳಿಗೆಯ ಮಹತ್ವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(3), 86–92

**ಉದ್ದೇಶ**

1. ಸುಡಗಾಡುಸಿದ್ಧ ಸಮುದಾಯದ ಸಾಮಾಜಿಕತೆಯನ್ನು ವಿಶ್ಲೇಷಿಸುವುದು.
2. ಸುಡಗಾಡುಸಿದ್ಧ ಸಮುದಾಯದ ಆಧ್ಯಾತ್ಮಿಕ ಮತ್ತು ಆಚರಣಾತ್ಮಕ ಬದುಕನ್ನು ವಿಶ್ಲೇಷಿಸುವುದು.

## ಫಲಿತಾಂಶ ಮತ್ತು ಚರ್ಚೆಗಳು

**ಕೊಷ್ಟಕ 1: ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲೆ ಸುಡಗಾಡು ಸಿದ್ಧ ಸಮುದಾಯದ ತಾಲೂಕುವಾರು ಕುಟುಂಬ ಹಾಗೂ ಲಿಂಗವಾರು ಜನಸಂಖ್ಯೆ ಪ್ರಮಾಣ.**

| ತಾಲೂಕು | ನೆಲೆಗಳು | ಕುಟುಂಬಗಳು | ಜನಸಂಖ್ಯೆ | | |
|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು |
| ಕಂಪ್ಲಿ | ಕಂಪ್ಲಿ | 53 | 114 | 107 | 221 |
| ಕೂಡ್ಲಿಗಿ | ಬಡೆಲಡಕು | 127 | 337 | 327 | 664 |
| ಬಳ್ಳಾರಿ | ಹನುಮಾನ್ ನಗರ (ಬಳ್ಳಾರಿ) | 50 | 137 | 130 | 267 |
| ಸಂಡೂರು | ಯರದಮ್ಮನ ಹಳ್ಳಿ | 06 | 15 | 16 | 31 |
| ಹಗರಿ ಬೊಮ್ಮನ ಹಳ್ಳಿ | ಆನೇಕಲ್ಲು | 36 | 88 | 90 | 178 |
| | ನಂದಿಪುರ | 19 | 47 | 39 | 86 |
| | ಹಂಪಾಪಟ್ಟಣ | 46 | 127 | 128 | 225 |
| | ಹೆಚ್. ಓಬಳಾಪುರ | 49 | 154 | 111 | 265 |
| | ಹೆಚ್.ಬಿ.ಹಳ್ಳಿ | 18 | 36 | 45 | 81 |
| | ಹೊಸ್ಕೇರಿ | 45 | 125 | 113 | 238 |
| | | **213** | **577** | **526** | **1103** |
| ಹರಪನಹಳ್ಳಿ | ತೆಲಿಗಿ | 07 | 25 | 15 | 40 |
| ಹೊಸಪೇಟೆ | ಜಂಬುನಾಥ ನ ಹಳ್ಳಿ | 65 | 163 | 171 | 334 |
| | | **521** | **1368** | **1292** | **2660** |

ಅಧ್ಯಯನಕ್ಕೆ ಈ ಮೇಲ್ಕಂಡ ನೆಲೆಗಳಿಂದ ಕುಟುಂಬಗಳನ್ನು ಆಯ್ಕೆ ಮಾಡಿಕೊಂಡು ಸಂಶೋಧನೆ ಮಾಡಲಾಗಿದೆ. ಕಂಪ್ಲಿ ತಾಲೂಕು, ಕಂಪ್ಲಿಯಲ್ಲಿ ಎಂ.ಡಿ ಕಾಲೋನಿಯಲ್ಲಿ 8.31 ರಷ್ಟು ಜನ ವಾಸವಾಗಿದ್ದಾರೆ. ಹಾಗೆ ಬಡೆಲಡಕು ಗ್ರಾಮದಲ್ಲಿ ಊರಿನ ಮುಂಭಾಗದಲ್ಲಿ ಎಡಗಡೆ ಹಂಚಿನ ಮನೆಗಳಲ್ಲಿರುವ ಸಿದ್ಧರು ಶೇ.25% ರಷ್ಟು ವಾಸವಾಗಿದ್ದಾರೆ. ಬಳ್ಳಾರಿಯ ಹೊಸ ಬಸ್‌ನಿಲ್ದಾಣದ ಮಾರ್ಗದಲ್ಲಿ ಬರುವ ಎಪಿಎಂಸಿ ಮಾರ್ಕೆಟ್ ಹಿಂಭಾಗದಲ್ಲಿ ಇರುವ ಹನುಮಾನ್ ನಗರದಲ್ಲಿ (ಕಾಕರ್ಲ್ ತೋಟ) ಶೇ.10% ರಷ್ಟು ವಾಸವಾಗಿದ್ದಾರೆ. ಹಾಗೆ ಸಂಡೂರು ತಾಲೂಕಿನ ಚೋರನೂರು ಗ್ರಾಮದ ನಂತರ ಮುಂದಿನ ಗ್ರಾಮದ ಯದರಮ್ಮನಹಳ್ಳಿಯಲ್ಲಿ ಊರಿನ ಮಧ್ಯಭಾಗದಲ್ಲಿ ಶೇ.1.17 ರಷ್ಟು ವಾಸವಾಗಿದ್ದಾರೆ. ಆನೇಕಲ್ಲು ಗ್ರಾಮದಲ್ಲಿ ಊರಿನ ಮುಂಭಾಗದಲ್ಲಿಯೇ ಇದ್ದು, ಶೇ.16.1% ರಷ್ಟು ಕಂಡು ಬರುತ್ತದೆ. ಹಾಗೆ ನಂದಿಪುರ ಗ್ರಾಮದಲ್ಲಿ ದೊಡ್ಡಬಸವೇಶ್ವರ ದೇವಾಲಯದ ಹಿಂಭಾಗದಲ್ಲಿ ಇರುವ ಇವರು ಶೇ.7.8% ರಷ್ಟು ಕಂಡು ಬರುತ್ತಾರೆ. ಮತ್ತು ಹಂಪಾಪಟ್ಟಣ ಗ್ರಾಮದ ರೈಲ್ವೆ ಹಳಿಯ ಪಕ್ಕದಲ್ಲಿಯೇ ಇರುವ ಇವರು ಶೇ.23.1% ರಷ್ಟು ವಾಸವಾಗಿದ್ದಾರೆ. ಹೆಚ್.ಓಬಳಾಪುರ ಗ್ರಾಮದ ಎಡಬದಿಯಲಿ ಇವರು ಶೇ.24% ರಷ್ಟು ಕುಟುಂಬಗಳು ವಾಸವಾಗಿದ್ದಾರೆ. ಹೆಚ್.ಬಿ.ಹಳ್ಳಿ ಹೊಸ ಊರಿನ ರಾಮ್ ರಹೀಂ ನಗರದ ಅಂಚಿನಲ್ಲಿ ಹಾಗೂ ಹಳೆ ಊರಿನ ಜಗಜ್ಯೋತಿನಗರದ ಕೆನಾಲ್ ಪಕ್ಕದಲ್ಲಿ ಎರಡು ಊರುಗಳಿಂದ ಶೇ.7.34 ರಷ್ಟು ಕುಟುಂಬಗಳು ವಾಸವಾಗಿದ್ದಾರೆ. ಹೊಸ್ಕೇರಿ ಗ್ರಾಮದಲ್ಲಿ ಮುಂಭಾಗದಲ್ಲಿ ವೀರಭದ್ರೇಶ್ವರ ದೇವಾಲಯದ ಮುಂಬದಿಯಲ್ಲಿ **ಶೇ.22.4%** ರಷ್ಟು ವಾಸವಾಗಿದ್ದಾರೆ. ಹಾಗೂ ತೆಲಿಗಿ ಗ್ರಾಮದ ಊರ ಹೊರವಲಯದಲ್ಲಿ ಪಾಂಡುರಂಗಸ್ವಾಮಿ ದೇವಾಲಯದ ಹಿಂಬದಿಯಲ್ಲಿ ಶೇ.1.5% ರಷ್ಟು ಕುಟುಂಬಗಳು ವಾಸವಾಗಿದ್ದಾರೆ. ಹೊಸಪೇಟೆ ವಲಯದಲ್ಲಿ ಬಳ್ಳಾರಿ ರಸ್ತೆ ಮಾರ್ಗದಲ್ಲಿ ಬರುವ ಜಂಬುನಾಥ ಗುಡ್ಡದ ಪಕ್ಕದಲ್ಲಿ ಶೇ.12.6% ಕುಟುಂಬಗಳು ವಾಸವಾಗಿದ್ದಾರೆ. ಹೆಚ್ಚಾಗಿ ಈ ಬಳ್ಳಾರಿ ಜಿಲ್ಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕಿನ ಶೇ.41.5% ರಷ್ಟು ಕುಟುಂಬಗಳು ವಾಸವಾಗಿದ್ದಾವೆ.

ಒಟ್ಟು 521 ಕುಟುಂಬಗಳು ಈ ಜಿಲ್ಲೆಯಲ್ಲಿ ಇದ್ದು, ಇದರಲ್ಲಿ 1368 ಗಂಡು ಮಕ್ಕಳು, 1292 ಹೆಣ್ಣು ಮಕ್ಕಳು, ಒಟ್ಟು 2660 ಜನಸಂಖ್ಯೆ ಹೊಂದಿದ್ದಾರೆ.

**ಸಮುದಾಯಕ್ಕಿರುವ ಇತರೆ ಹೆಸರುಗಳು:** ಕಾಡು ಸಿದ್ಧರು, ಸಿದ್ಧಯ್ಯರು, ಸ್ಮಶಾನ ಜೋಗಿಗಳು, ಕಾಟಿಪಾಪುಲು, ತೆಲುಗು ಜಂಗಮರು, ಭಿಕ್ಷಾಯಿಗಳು, ಜಂಗಮ ದೇವರು, ಕಟಾರಿ ಪಾಲಾಯಾತಕ, ಒಡೆಯರು, ಹರಿಕೆ ಸಿದ್ಧರು, ಜಂಗರು ಎಂದು ಕರೆಯುವ ವಾಡಿಕೆ ಇದೆ.

**ಕೋಷ್ಟಕ 2: ಸುಡುಗಾಡು ಸಿದ್ಧರ ಬೆಡಗುವಾರು ಕುಟುಂಬಗಳು**

| ಬೆಡಗು | ಕುಟುಂಬಗಳು | ಬೆಡಗು | ಕುಟುಂಬಗಳು |
|---|---|---|---|
| ಆಗಸ್ತದವರು | 1 | ತುರಾಪುಟ್ಟಯವರು | 22 |
| ಆನೆಗಂಟೆ | 6 | ಧೂಪದವರು | 14 |
| ಇಪ್ಪಿಯವರು | 1 | ನೂನಿಯವರು | 2 |
| ಒಂಟೆತ್ತಿನವರು | 27 | ನ್ಯಾರಲಕಂಠಿ | 21 |
| ಕಡಿಮಿ | 3 | ಪತ್ತಿಬಿರರು | 15 |
| ಕಡುಮಂಚೋಳ್ | 23 | ಪತ್ರಿಯವರು | 4 |
| ಕತ್ತೆಯವರು | 18 | ಪಸ್ತಮೋಳ್ (ಪಸ್ತಮರು) | 29 |
| ಕಮ್ಮಾರರು | 2 | ಪಾವಣದವರು | 4 |
| ಕರಿಯರು | 11 | ಬಂಡಾರಿ | 2 |
| ಕಲ್ಯಾಣದವರು | 45 | ಬಾಡ್ಗಿ | 38 |
| ಕಿನ್ನರಿ (ಕಿನ್ರಿ) | 30 | ಬೆಲ್ಲದ್ | 14 |
| ಕುಮಾರಿಯವರು | 15 | ಮುಗ್ಗುವರ್ | 64 |
| ಕುಲುಮಿ | 1 | ಮುದ್ದಿಯವರು | 17 |
| ಕೊಂಡ್ರು | 24 | ಮೂಡ್ಶಿ | 1 |
| ಕೊಮಾರರು | 6 | ಮೋಡಿಮಿಯಾರ್ | 7 |
| ಕೋಜಿಯವರು | 1 | ವರ್ಧನವರು | 2 |
| ಖಡ್ಗದವರು | 1 | ವಿಭೂತಿಯರು | 6 |
| ಗಂಟೇರು | 23 | ಶಂಖಿನವರು | 1 |
| ಗಡ್ಡದವರು | 10 | ಶ್ರೀಶೈಲದವರು | 1 |
| ಚಿಟುಮುಟಿಯವರು | 5 | ಸಂಕೋರರು | 1 |
| ಜಂಗಲರು | 1 | ಸತಾಸಿನ್‌ರವರು(ಸತಸಿಂಧಿ) | 1 |
| ಡೊಕ್ಕಣವರು | 1 | | |

**ಸುಡುಗಾಡು ಸಿದ್ಧರ ಜೋಳಿಗೆಯ ಮಹತ್ವ**

ಈ ಸಮುದಾಯದಲ್ಲಿ ಜೋಳಿಗೆಗೆ ವಿಶೇಷವಾದ ಮನ್ನಣೆ ಇದ್ದು, ಇದಕ್ಕೆ ಶಿವನ ಜೋಳಿಗೆ ಎಂದು ಕರೆಯುತ್ತಾರೆ. ಮತ್ತು ಇವರದೇ ಆದ ಭಾವನಾತ್ಮಕ ಸಂಬಂಧ ಈ ಸಿದ್ಧರಲ್ಲಿ ಇದೆ. ಸುಡುಗಾಡು ಸಿದ್ಧರಿಗೆ ಭಿಕ್ಷಾಟನೆಗೆ ಪ್ರಮುಖವಾದ ಸಾಧನವೇ ಜೋಳಿಗೆಯಾಗಿದೆ. ಸಿದ್ಧರು ಎಂದು ಹುಟ್ಟಿದರೋ ಅಂದಿನಿಂದಲೇ ಈ ಜೋಳಿಗೆ ಅಂಟಿಕೊಂಡಿದೆ ಎಂಬುದು ವಕ್ತೃಗಳಿಂದ ತಿಳಿದು ಬರುತ್ತದೆ. (ಮಾಹಿತಿ: ರಾಜಣ್ಣ, ಕಂಪ್ಲಿ) ಹಾಗೆ ಸಿದ್ಧರ ಗಾದೆಯಲ್ಲಿ 'ಮುದ್ದೆಯಂತ ಊಟವಿಲ್ಲ, ಸಿದ್ಧರೊಳಗಿರುವ ಜೋಳಿಗೆಯ ಆಟವಿಲ್ಲ' ಎಂಬಂತೆ ಆಡು ಭಾಷೆಯಲ್ಲಿ ಕರೆಯಲಾಗುತ್ತದೆ. ಹೀಗೆ ಸುಡುಗಾಡು ಸಿದ್ಧರು ಪ್ರತೀ ಗ್ರಾಮಕ್ಕೆ ಭಿಕ್ಷಾಟನೆಗೆ ಹೋಗುವ ಸಮಯದಲ್ಲಿ ಜೋಳಿಗೆಯನ್ನು ಬಲಭಾಗದ ಭುಜಕ್ಕೆ ನೇತಾಕಿಕೊಂಡು ಸಾಗುತ್ತಾರೆ. ಇದು ಪೂಜ್ಯನೀಯ ಮನೋಭಾವನಾತ್ಮಕವಾದ ಸಂಬಂಧ ಹೊಂದಿದೆ. ಹಿರಿಯರಿಂದ ಕಿರಿಯರಿಗೆ ಬಳುವಳಿಯಾಗಿ ಜೋಳಿಗೆಯನ್ನು ನೀಡುವ ಪದ್ಧತಿ ಸಮುದಾಯದಲ್ಲಿ ಕಂಡು ಬರುತ್ತದೆ. ಕೆಲವು ಹಬ್ಬ, ಹರಿದಿನಗಳಲ್ಲಿ ವಿಶೇಷವಾದ ಪೂಜಾ ಪದ್ಧತಿಗಳು ಜೋಳಿಗೆಗೆ ನೆರವೇರಿಸುತ್ತಾರೆ. ದಸರಾ ಹಬ್ಬದ ಸಮಯದಲ್ಲಿ ಇವರ ಹಿರಿಯರ ಜೋಳಿಗೆಗಳನ್ನು ಗದ್ದಿಗೆಗೆ ಏರಿಸಿ ಪೂಜಿಸುವ ಪರಿಪಾಠ ಇರುವುದನ್ನು ಇವರ ಪ್ರತಿ ಮನೆಯಲ್ಲಿಯೂ ನೋಡಬಹುದು. ಹಾಗೆ ಭಿಕ್ಷಾಟನೆಗೆ ಹೋದ ಸಂದರ್ಭದಲ್ಲಿ ಯಾವುದೇ ವಸ್ತುಗಳು ಕೊಟ್ಟರೂ ಜೋಳಿಗೆಯಲ್ಲಿ ಭದ್ರಗೊಳಿಸುತ್ತಾರೆ. ಹಾಗೂ ಸಂಬಂಧಗಳ ಬೆಸುಗೆಯಲ್ಲಿ ಮಗಳ ಕೊಟ್ಟ ಮನೆತನಕ್ಕೆ ಅಳಿಯನಿಗೆ ಕೆಲವೊಮ್ಮೆ ಜೋಳಿಗೆಯನ್ನು ಕೂಡ ವರದಕ್ಷಿಣೆ ಭಾವನೆಯ ರೂಪದಲ್ಲಿ ಕೊಡುವಂತಹ ಪದ್ಧತಿ ಸಮುದಾಯದಲ್ಲಿ ಆಗಿವೆ ಎಂದು ವಕ್ತೃಗಳಿಂದ ತಿಳಿಯುತ್ತದೆ. (ಮಾಹಿತಿ ವೀರಭದ್ರಪ್ಪ ಹೊಸ್ಕೇರಿ) ಆದರೆ ಇವತ್ತಿನ ವಾಸ್ತವದಲ್ಲಿ ಇಂತಹ ಪದ್ಧತಿ

ಕ್ಷೀಣಿಸಿರುವುದು ಕಾಣಬಹುದು. ಹಾಗೆ ಜೋಳಿಗೆಯೇ ಇವರ ಮೂಲ ಹೊಟ್ಟೆಯ ತುಂಬಿಸುವ ಸಾಧನವಾಗಿದ್ದು, ಇದು ಕಾವಿಭರಿತ ಬಟ್ಟೆಯಿಂದ ಸಿದ್ಧಪಡಿಸಿಕೊಂಡಿರುತ್ತಾರೆ. ಯಾವ ವಸ್ತು ಕಳೆದುಕೊಂಡರೂ ಜೋಳಿಗೆಯನ್ನು ಎಂದೂ ಈ ಸಿದ್ಧಯ್ಯರು ಕಳೆದುಕೊಳ್ಳುವುದಿಲ್ಲ. ಇದು ಇವರ ಪೂರ್ವಜರಿಂದ ಬಂದಂತಹ ಬಳುವಳಿಯ ಆಸ್ತಿಯಾಗಿ ಕಾಪಾಡಿಕೊಳ್ಳುತ್ತಿರುವುದು ಸ್ಪಷ್ಟಪಡಿಸಬಹುದು. ಆದರೆ ಇವತ್ತಿನ ಜಾಗತೀಕರಣದಲ್ಲಿ ಇವರು ಹಾಕಿಕೊಳ್ಳುತ್ತಿರುವ ಜೋಳಿಗೆಯ ಸಿದ್ಧಪಡಿಸುವ ಕ್ರಮವು ಸ್ವಲ್ಪಮಟ್ಟಿಗೆ ಬದಲಾವಣೆಯ ಕಡೆಗೆ ನಡೆದಿರುವುದು ಇದೆ. ಕಾವಿಯೇ ಸುಡುಗಾಡು ಸಿದ್ಧರಿಗೆ ಪವಿತ್ರವಾದ ವಸ್ತ್ರವಾಗಿತ್ತು. ಇದರಿಂದಲೇ ಪ್ರತಿಯೊಂದು ಅಲಂಕಾರಗಳು ಸಿದ್ಧಪಡಿಸಿಕೊಳ್ಳುತ್ತಿದ್ದರು. ಆದರೆ ಇಂದು ಇವರ ಜೋಳಿಗೆಯ ಕ್ರಮವು ಆಧುನಿಕತೆಯ ಪ್ಲಾಸ್ಟಿಕ್ ಚೀಲಗಳ ಮತ್ತು ಕೌದಿ ಬಟ್ಟೆಗಳಿಂದ ಹೆಣೆದುಕೊಂಡು ಜೋಳಿಗೆಯನ್ನು ಸಿದ್ಧಪಡಿಸಿ ಭಿಕ್ಷಾಟನೆಗೆ ಹೋಗುತ್ತಿರುವ ಕ್ರಮ ಕಂಡು ಬರುತ್ತದೆ. ಇದಕ್ಕೆ ಕಾರಣ ಇಂತಹ ಜೋಳಿಗೆಗಳು ಧೀರ್ಘ ಕಾಲದ ಬಾಳಿಗೆ ಬರುತ್ತದೆ ಎಂಬ ಕಾರಣದಿಂದ ಕಾವಿಯ ವ್ಯವಸ್ಥೆಭರಿತ ಜೋಳಿಗೆ ಇಂದು ಆಧುನಿಕತೆಯಲ್ಲಿ ಬದಲಾಗಿರುವುದನ್ನು ನೋಡಬಹುದು. ಹಾಗೆ ಇವರಲ್ಲಿ 16 ಪದರಿನ ಜೋಳಿಗೆಯ ಕ್ರಮ ಪದ್ಧತಿ ಕಂಡು ಬರುತ್ತಲಿತ್ತು. ಈ 16 ಪದರುಗಳ ಜೋಳಿಗೆಯೇ ಹಾಕಿಕೊಳ್ಳಲು ಕಾರಣ 16 ಎಂಬಂತಹ ಸಂಖ್ಯೆ ಇದು ಗುರುಬಲ ಮತ್ತು ಗುರುತತ್ವದ ಪ್ರಭುತ್ವತೆಯನ್ನು ಪ್ರಜ್ವಲಿಸುತ್ತದೆ ಎಂಬುದು ವಕ್ತೃಗಳಿಂದ ತಿಳಿಯುತ್ತದೆ. ಹಾಗೆ ಜೋಳಿಗೆಯ ಈ ಪ್ರತ್ಯೇಕ ಪದರಿನ ವಿಂಗಡಿಸಿಕೊಂಡು ಭಿಕ್ಷಾಟನೆಗೆ ಹೋದ ಸಂದರ್ಭದಲ್ಲಿ ಕೊಡುವ ಕಾಳು, ಕಡ್ಡಿಗಳನ್ನು ವಿಂಗಡಿಸಿ ಸಂಗ್ರಹಿಸಿಕೊಳ್ಳಲು ಒಂದು ಕಾರಣ ಕೂಡ ಆಗಿದೆ ಎಂಬುದು ತಿಳಿಯುತ್ತದೆ. ಒಂದರಲ್ಲಿ ಅಕ್ಕಿ, ಮತ್ತೊಂದು ಪದರಿನಲ್ಲಿ ಜೋಳ, ಮತ್ತೊಂದು ಪದರಿನಲ್ಲಿ ಗಿಡ ಮೂಲಿಕೆ ಔಷಧಿಗಳು ಹಾಗೂ ಆಟಕ್ಕೆ ಬೇಕಾಗಿರುವ ವಸ್ತುಗಳ ಸಂಗ್ರಹಣೆ ಇವೆಲ್ಲವೂ ಕೂಡ ಇದೇ ಜೋಳಿಗೆಯಲ್ಲಿ ವಿಂಗಡಣೆಗೊಂಡು ಹೆಗಲಿಗೆ ಹಾಕಿ ನಡೆಯುವಂತಹ ಪರಿಪಾಠ ಇವರಲ್ಲಿದೆ. ಇಂತಹ ಜೋಳಿಗೆಯ ಪವಿತ್ರತೆ ಇವತ್ತಿನ ವಾಸ್ತವದ ಅಂಚಿನಲ್ಲಿ ಎಲ್ಲವೂ ಬದಲಾಗುತ್ತ ನೂತನವಾಗಿ ಸಿದ್ಧಪಡಿಸಿಕೊಳ್ಳುವ ವಸ್ತುಗಳ ಮೊರೆ ಹೋಗುತ್ತಿರುವುದು ನೋಡಬಹುದು. ಯಾವ ಜೋಳಿಗೆ ಹೊಟ್ಟೆ ತುಂಬಿಸುವುದಕ್ಕೋಸ್ಕರ ನೇತಾಕಿಕೊಂಡು ನಡೆದ ಅಲೆಮಾರಿಗಳು ಇದೇ ಜೋಳಿಗೆ ಮತ್ತೊಂದು ಹೊಸತನದ ತಿರುವಿಗೆ ಇವತ್ತಿನ ಜಾಗತೀಕರಣದಲ್ಲಿ ಮಹಿಳೆಯರು ಹಾಕಿಕೊಳ್ಳುವ ವ್ಯಾನಿಟಿ ಬ್ಯಾಗ್ ಇದು ಜೋಳಿಗೆಯ ಮತ್ತೊಂದು ರೂಪವಾಗಿ ಇವತ್ತಿನ ವಾಸ್ತವದಲ್ಲಿ ಪ್ರಜ್ವಲಿಸುತ್ತಿರುವುದು ಕಾಣುತ್ತೇವೆ. ಹೀಗೆ ವಾಸ್ತವದಲ್ಲಿ ಇವರ ಜೋಳಿಗೆಯ ಮಹತ್ವ ಮತ್ತು ಪವಿತ್ರತೆ ಸ್ವಲ್ಪಮಟ್ಟಿಗೆ ಬದಲಾಗುತ್ತಾ ಸಾಗುತ್ತಿರುವುದು ತಿಳಿಯುತ್ತದೆ. ಆದರೆ ಈ ಸಮುದಾಯಗಳಲ್ಲಿ ಹಬ್ಬ, ಹರಿದಿನಗಳಲ್ಲಿ ಜೋಳಿಗೆಗೆ ಹಿಂದೆ ಕೊಡುವಷ್ಟೇ ಪ್ರಾಮುಖ್ಯತೆಯನ್ನು ಕೊಡುತ್ತಿರುವುದು ನೋಡಬಹುದು. ಮುಂಬರುವ ದಿನಗಳಲ್ಲಿ ಇಂತಹ ಭಾವನಾತ್ಮಕ ಜೋಳಿಗೆಗೂ ಮತ್ತು ಸಿದ್ಧರಿಗೂ ಇರುವಂತಹ ಪವಿತ್ರತೆಯ ಸಂಬಂಧಗಳು ಮರೆಮಾಚುತ್ತ ದೂರ ಸರಿಯುವುದರಲ್ಲಿ ಯಾವುದೇ ಸಂಶಯವಿಲ್ಲ. ಇಂತಹ ಜನಪದರ ಬದುಕಿನಂತೆ ಬದುಕುತ್ತಿರುವ ಈ ಸುಡುಗಾಡು ಸಿದ್ಧರ ಸಂಬಂಧ ಮತ್ತು ಭಾವನೆಗಳು ಇಂತಹ ವಸ್ತುಗಳ ಮೇಲೆ ಉಳಿಯಬೇಕಾಗಿದೆ. ಮುಂದಿನ ಯುವಪೀಳಿಗೆಗೆ ಅದರ ಮಹತ್ವ ಮತ್ತು ಮೂಲ ಅರಿಯಲು ಇವರ ಪಾರಂಪರಿಕವಾಗಿ ನಡೆದುಕೊಂಡು ಬಂದ ಧಾರ್ಮಿಕತೆಯ ಬೆಳಕು ಹಾಗೂ ಇದರ ಭಾವನೆ ಉಳಿಯಬೇಕಾಗಿದೆ. ಸಮುದಾಯದ ಯುವಪೀಳಿಗೆಗೆ ಕಾಯಕದ ಪ್ರತಿಯೊಂದು ವಸ್ತ್ರಗಳ ಮತ್ತು ವಸ್ತುಗಳ

ಚರಿತ್ರೆ ಅದರ ಶಕ್ತಿ ಮಹತ್ವವನ್ನು ಸ್ಪಷ್ಟೀಕರಿಸಲು ಸಾಧ್ಯವಾಗುತ್ತದೆ ಎಂದು ಹೇಳಬಹುದು. ಆದಕಾರಣ ಈ ಸಂಗತಿಗಳು ಚಿತ್ರಿಸುವಂತಹ ಅನೇಕ ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳು ಉಳಿಯಬೇಕಾಗಿದೆ. ಈ ಕೆಳಕಂಡತೆ ಹಾಡುಗಳು ಇವರ ಧರ್ಮ ಭೀಕ್ಷಾಟನೆಯಲ್ಲಿ ಹೇಳುವುದು ಕಂಡುಬರುತ್ತಲಿದೆ.

*ಓಂ ಹರಿಕೆಯನು ಮಾಡಯ್ಯ ಹೊರಳುವ ಮಹಾದೇವ*

*ಗುರುವೇ ಗುರುವೇ ಎಂದು ಪರಮ ಪರಿಪೂರ್ಣ*

*ನಿಮ್ಮ ಪಾದದ ಧೂಳು ಪರರಿಗೆ ಸೋಂಕಿದರೆ ಹರಿದು ಹೋಗುವುದು*
*ಸರಿತ ಪರಿಜ್ಞಾನದಲ್ಲಿ ಲಿಂಗದಲ್ಲಿ ಕಾಣುವುದು ಶ್ರೀಗುರು ಬೆನ್ನರಾಯ*
*ಎಂಬಂತೆ ಅವರ ಮನೆ ದೇವರನ್ನು ಹೆಸರು ಹೇಳುತ್ತ ನೆನೆದು ಭಿಕ್ಷೆ ಕೇಳುತ್ತಾರೆ.*

*ಪರಮ ಆರೋಡ ಸಿದ್ಧಪೊರೆಯನ್ನು ಕರುಣದಲ್ಲಿ ಪರಿಹರಿಸು*

*ನಿನ್ನ ಭವಬಾಂಧವ ಚಿರಕಾಲದಲ್ಲಿ ನಿನ್ನ ಸ್ಮರಣೆಯನ್ನು ಮರೆಯದೆ*

*ಮಾಳ್ಪೆ ಪರಮಗುರು ನೀನು ಇಂದು ಶೃತಿ ಸಾರುವುದು ಇಂದು*

*ಅರವುಳ್ಳ ಮಹಾರಾಜ ಸರಿಯೆತ್ತಿ ಧರಿಮೇಲೆ ಬಂದು ನರ ರೂಪಗಳ ರಕ್ಷಿವಯ್ಯ*

*ಪರಮಮುಕ್ತಿಯ ಪುರುಷ ಉರುಳ ಪ್ರಪಂಚವನ್ನರಸಿ ಭವಸರಧಿಯನ್ನು ಮಾಡಿ*

*ಪಾರು ಮಾಡಯ್ಯ ಪರಶಿವನೇ ಶ್ರೀ ಗುರು ವೀರಭದ್ರೇಶ್ವರ*

*ಇವರು ಕೊಟ್ಟ ದಾನ ಧರ್ಮಗಳಲ್ಲಿ ಪುಣ್ಯ ಚೈತ್ರವಾಗಲಿ ಮಕ್ಕಳು ಮರಿಗಳಲ್ಲಿ*

*ಜಯಕಾರವಾಗಲಿ, ಉದ್ಧಾರವಾಗಲಿ, ಉದುಮತಿಯಾಗಲಿ, ದುಷ್ಟ ಕಂಠಗಳು ದೂರಾಗಲಿ*

*ಅಷ್ಟನವಗ್ರಹಗಳು ಇಂದಾಗಲಿ, ಕಾಟ, ಕರ್ಮಗಳು, ದಂಡ, ದೋಷಗಳು ದೂರು ಮಾಡಯ್ಯ*

*ಪರಶಿವನೇ ಶ್ರೀ ಗುರು ಬೆಂಡವಾಳದ ರೇವಣಸಿದ್ಧೇಶ್ವರ ಇವರ ಮನೆ ಬೆಳಕಾಗಲಿ*

*ಅಕ್ಕ ತಮ್ಮಂದಿರಲ್ಲಿ, ಅಣ್ಣ ತಮ್ಮಂದಿರಲ್ಲಿ ಮಕ್ಕಳು ದೊಡ್ಡವರಾಗಿ*

*ಕಲ್ಯಾಣವಾದೀತು ಎಂಬ ತೊಟ್ಟಿಲುವಾಗಲಿ, ರಾಮ ಭೀಮನಂತ*

*ಜೋಡಿ ಬಸವಕಟ್ಟಿ ಇಡಿಬಿತ್ತಿ ಖಡ್ಗ ಬೆಳೆಯಲಿ*

*ಹಾಲುವೇದ ರುದ್ರವಾಗಲಿ ಗುರುವಿನ ಕೊಂಡಾಡಿ ಮುದ್ದಾಡಿ*

*ತಾನು ಕೂಡ ಶಿವ ಶಿವ ಎಂದೆಂತನು ಶಿವ ಧ್ಯಾನವನ್ನು ಮಾಡುತ್ತಿರುವಿರಯ್ಯ*

*ದಶಮಾಪುರ ಗ್ರಾಮದಲ್ಲಿ.*

*ಹುಬ್ಬಳ್ಳಿ ಸಿದ್ಧಾರೂಢ ಗದುಗಿನ ಚಿದಾನಂದ, ಧಾರವಾಡದ ಮೃತ್ಯುಂಜಯ್ಯ*

*ಕೊಪ್ಪಳದ ಗವಿಸಿದ್ದೇಶ್ವರ, ಹಾನಗಲ್ಲು ಕುಮಾರಸ್ವಾಮಿ, ಹಂಪಿ ಪಂಪಾಪತಿ ದೇವರು*

*ಉಜ್ಜಯಿನಿ ಮರಳುಸಿದ್ದೇಶ್ವರ ಓಂ ನಮಃ ಶಿವಾಯಃ*

*ಅಣ್ಣಿಗೇರಿ ಅಮೃತಲಿಂಗ ಕೀರುಗಾಳದ ಪ್ರಭುಲಿಂಗ ದೇವರು*

*ಜಮಖಂಡಿ ಜಂಬುಲಿಂಗ, ಕುಂದವಾಳದ ಶಂಭುಲಿಂಗ*

*ಆತ್ಮಲಿಂಗ ಅನುಭಾವ ಲಿಂಗ ಏಳುಕೋಟಿ ಮೈಲಾರಲಿಂಗ*

*ಗೋಕರ್ಣ ಲಿಂಗ ತಂಗೋಳಿ ಶಿವಲಿಂಗೇಶ್ವರ ಮುನುವಳ್ಳಿ ಪಂಚಲಿಂಗೇಶ್ವರ*

*ಕಂಪ್ಲಿ ಸೋಮಲಿಂಗೇಶ್ವರ ಹರಿಹರದ ಮಹಾಲಿಂಗೇಶ್ವರ ಇವರ ಮನೆ ಬೆಳಕಾಗಲೀ*

*ಜಯವಾಗಲಿ ಜಯವಾಗಲಿ ಜಯವಾಗಲಿ ಜಯವಾಗಲಿ*

*ತೆಕ್ಕಲಕೋಟಿ ಕಾಡುಸಿದ್ಧ ನೂಕುಮಲೈ ಕರಿಸಿದ್ಧ ಅಮೋಘಸಿದ್ಧ ಗುಪ್ತಸಿದ್ಧ*

*ಹರಿಯಾಣಸಿದ್ಧ ನುಂಕುಮಲೈಯ ಸಿದ್ಧ ಬೆಂಡವಾಳದ ರೇವಣಸಿದ್ಧ ಕರಿಯಸಿದ್ಧ*

***ಹುಬ್ಬಳ್ಳಿ ಸಿದ್ಧಾರೂಡ ಓಂ ನಮಃ ಶಿವಾಯಃ***

***ಜಯ ಜಯವಾಗಲಿ ರೇವಣಸಿದ್ಧ ಸುಡುಗಾಡು ಸಿದ್ಧನಿಗೆ***

***ಅಧಿಪತಿಯಾದ ರೇವಣಸಿದ್ದೇಶ್ವರ ಇವರ ಮನೆ ಬೆಳಕಾಗಿ***

***ಓಂ ನಮಃ ಶಿವಾಯಃ, (ಮಾಹಿತಿ ಅಂಜಿನಪ್ಪ ಹೊಸ್ಕೇರಿ)***

ಮನೆಗಳಲ್ಲಿ ಮೊದಲು ಕಣ್ಣಿಗೆ ಕಾಣುವುದೇ ಇವರ ಜೋಳಿಗೆ ಮತ್ತು ಒಂದು ಬೆತ್ತ. ಇವುಗಳು ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿರುವ ಸಿದ್ಧರ ಮನೆಗಳಲ್ಲಿ ಇವತ್ತಿನ ವಾಸ್ತವದಲ್ಲಿ ವೀಕ್ಷಿಸಬಹುದು. ಹೊಸ್ಕೇರಿ, ಹಂಪಾಪಟ್ಟಣ, ಆನೇಕಲ್ಲು, ನಂದಿಪುರ, ಓಬಳಾಪುರ ಈ ಪ್ರದೇಶಗಳಲ್ಲಿ ಇವರ ಮನೆಗಳಲ್ಲಿ ಕಾಣಬಹುದು. ಜೋಳಿಗೆ ಹೆಗಲಿನಿಂದ ಸೊಂಟಕ್ಕೆ ಬರುವಷ್ಟು ಉದ್ದನೆಯ ಜೋಳಿಗೆಯನ್ನು ನೇತಾಕಿಕೊಂಡು ಸಾಗುತ್ತಲಿದ್ದಾರೆ. ಅವರ ದೇಹದ ಎತ್ತರದ ಅನುಕೂಲಕ್ಕೆ ತಕ್ಕಂತೆ ರಚನೆ ಮಾಡಿಕೊಳ್ಳುತ್ತಾರೆ. ಹಾಗೆ ವೀರಶೈವ ಸಮುದಾಯದವರು (ಜಂಗಮರು) ಬೇಡುವ ಪದ್ಧತಿಯು ಜೋಳಿಗೆಯಲ್ಲಿಯೇ. ಈ ಸಮುದಾಯದಲ್ಲಿ ಇದಕ್ಕೆ ಮಹತ್ವ ನೀಡಿದ್ದಾರೆ. ಜಂಗಮರು ಕಂತೆ ಭಿಕ್ಷೆ ಎಂದು ಕೇವಲ ಲಿಂಗಾಯತ ಮನೆಗಳಿಗೆ ಮಾತ್ರ ಹೋಗಿ ಬೇಡುತ್ತಾರೆ. ಇವರು ಬೇಡುವ ಕಂತೆ ಭಿಕ್ಷೆಯ ಹಾದಿಯಲ್ಲಿಯೇ ನಡೆದ ಇವರ ಧರ್ಮ ಭಿಕ್ಷಾಟನೆ ಎಂಬುದಾಗಿ ಈ ಸಿದ್ಧರ ಜೋಳಿಗೆಯ ವೈಶಿಷ್ಟ್ಯತೆಯನ್ನು ಅರಿಯಬಹುದು. ಕಾರಣ ಇವರ ವಸ್ತ್ರಾಲಂಕರಗಳೆಲ್ಲವೂ ಒಂದೇ ಆಗಿ ಗೋಚರಿಸುತ್ತಲಿವೆ. ಮನೆಯ ಒಳಗಡೆ ನಿಂತು ಬೇಡುವ ಜಂಗಮರು ಇದೇ ಹೆಜ್ಜೆಯನ್ನು ತುಳಿದ ಈ ಸುಡುಗಾಡು ಸಿದ್ಧರು ಅಂಗಳದ ಹೊರಗಡೆ ನಿಂತು ಬೇಡುವಂತದ್ದು ಕಾಣುತ್ತೇವೆ. ಲಿಂಗಾಯತ ವೀರಶೈವರ ಪ್ರಭಾವ ಈ ಸಮುದಾಯದ ಮೇಲೆ ಚೆಲ್ಲಿದೆ ಎಂದು ಭಾವಿಸುತ್ತೇನೆ. ಇವರ ಜೋಳಿಗೆ ಭಕ್ತಿ ಮೌಲ್ಯ ತಲೆ ತಲೆಮಾರುಗಳಿಂದ ಬರುತ್ತಲೇ ಇದೆ. ಅನೇಕ ಮೌಢ್ಯತೆಗಳು ಕಳೆದರೂ ಅಕ್ಷರ ಜ್ಞಾನದ ಶ್ರೇಷ್ಠತೆ ಇವತ್ತಿನ ವಾಸ್ತವದಲ್ಲಿ ಮೆರೆದರೂ ಈ ವಸ್ತುಗಳಿಗೆ ಇವರು ಅಷ್ಟೇ ಭಕ್ತಿ ಭಾವುಕತೆ ಕಂಡು ಬರುತ್ತದೆ. ಇದು ಕೇವಲ ಪಾಳ್ಯದೊಳಗಿನ ಸಂಬಂಧವಾಗಿದೆ ಎಂದು ಭಾವಿಸಬಹುದು. ಸಮಾಜದ ಮಧ್ಯೆ ಜೋಳಿಗೆ ಹಿಡಿದು ನಡೆಯಲು ವರ್ತಮಾನದ ಯುವಪೀಳಿಗೆ ಧಿಕ್ಕರಿಸುತ್ತಿದ್ದಾರೆ. ಮುಜುಗರ ಉಂಟಾಗುತ್ತದೆ ಎಂಬ ಭಾವನೆ ಇದೆ ಎಂಬುದು ಇವರ ಮನೋಜ್ಞಾನದಿಂದ ಸ್ಪಷ್ಟಗೊಳ್ಳುತ್ತದೆ. ಇದಕ್ಕೆ ಕಾರಣ ಕ್ಷೇತ್ರ ಕಾರ್ಯಕ್ಕೆ ಹೋದ ಸಂದರ್ಭದಲ್ಲಿ ಇವರ ಸಮುದಾಯದ ಯುವಪೀಳಿಗೆಯ ನಡೆ, ನುಡಿಗಳು ವಾಸ್ತವದ ವಸ್ತುಗಳ ಚಹರೆಗಳಿಂದ ಸ್ಪಷ್ಟಗೊಳ್ಳುತ್ತದೆ. ಮೇಲೆ ಹೇಳಿದ ಹಾಗೆ ಮುಂದಿನ ದಿನಗಳಲ್ಲಿ ಜೋಳಿಗೆಯನ್ನು ಹಾಕಿ ಬೇಡುವ ಪದ್ಧತಿ ಇನ್ನು ಸ್ವಲ್ಪ ವರ್ಷಗಳಲ್ಲೇ ಗ್ರಾಮೀಣ ಮತ್ತು ನಗರಗಳಲ್ಲಿಯೂ ಮರೆಮಾಚುತ್ತದೆ ಎಂಬುದು ಸ್ಪಷ್ಟಪಡಿಸಬಹುದು.

**ಪರಾಮರ್ಶನ ಗ್ರಂಥಗಳು**


- ಅರ್ಜುನ ಗೋಳಸಂಗಿ. (2006). *ದಲಿತರ ಬದುಕು ಮತ್ತು ಸಂಸ್ಕೃತಿ.* ಅಥಣಿ ಪ್ರಕಾಶನ.
- ಭಾಸ್ಕರ್ ಟಿ.ಎಂ. (2000). *ಸುಡುಗಾಡು ಸಿದ್ಧರ ಒಂದು ಸಂಸ್ಕೃತಿ ಅಧ್ಯಯನ.* ಮೆರಗು ಪ್ರಕಾಶನ.
- ಕಲವೀರ ಮನ್ವಾಚಾರ. (2020). *ಮಾತೃ ದೇವತೆ ಉಗಮ ಮತ್ತು ವಿಕಾಸ.* ಕವಲುದಾರಿ.
- ಕೃಷ್ಣಮೂರ್ತಿ, ಮ.ಸು. (2010). *ಸಿದ್ಧ ಸಾಹಿತ್ಯ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಮುರಿಗೆಪ್ಪ. (2011). ದಕ್ಷಿಣ ಭಾರತೀಯ ಜನಪದ ಕೋಶ, ಸಂಪುಟ 1, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ.

- ಪ್ರಭಾಕರ, ಎ.ಎಸ್. (2000). *ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
- ರಹಮತ್ ತರಿಕೆರೆ. (2006). *ಕರ್ನಾಟಕದ ನಾಥಪಂಥ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
- ರಮೇಶ್, ಸ.ಚಿ. (2005). *ಅಲೆಮಾರಿಗಳ ಸ್ಥಿತಿಗತಿ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ರಮೇಶ, ಸ.ಚಿ. (2003). *ಮಾಟ, ಮಂತ್ರ, ಮೋಡಿ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ವೀರಣ್ಣ ರಾಜೂರ. (2003). *ಕರ್ನಾಟಕ ಬುಡಕಟ್ಟುಗಳು.* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ


**ಅನುಬಂಧ–1 ಛಾಯಾ ಚಿತ್ರಗಳು**





